For Job Updates Visit: WWW.NEEDSOFPUBLIC.IN

URGENT

ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್
ಆಫ್ ಪೊಲೀಸ್‌ರವರ ಕಾರ್ಯಾಲಯ,
ಕರ್ನಾಟಕ ರಾಜ್ಯ, ನೃಪತುಂಗ ರಸ್ತೆ,
ಬೆಂಗಳೂರು - 560 001

**ಕರ್ನಾಟಕ ಸರ್ಕಾರ**
**(ಪೊಲೀಸ್ ಇಲಾಖೆ)**
**ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ರವರ ಕಛೇರಿ,**
**ಕರ್ನಾಟಕ ರಾಜ್ಯ, ನಂ.02, ನೃಪತುಂಗ ರಸ್ತೆ, ಬೆಂಗಳೂರು – 560001**

ದೂರವಾಣಿ ಸಂಖ್ಯೆ: 080-22942820/2826 ಇ-ಮೇಲ್ ವಿಳಾಸ: kspest1co@gmail.com

ಸಂಖ್ಯೆ: ಹೆಚ್‌ಆರ್‌ಎಂ-2(1)195/2020-21 ದಿನಾಂಕ:14.05.2026

ಇವರಿಗೆ,

1) ಪೊಲೀಸ್ ಮಹಾನಿರ್ದೇಶಕರು, ಸಿಐಡಿ/ ಆಂತರಿಕ ಭದ್ರತಾ ವಿಭಾಗ, ಬೆಂಗಳೂರು
2) ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ಕೆಎಸ್‌ಆರ್‌ಪಿ, ಬೆಂಗಳೂರು.
3) ಎಲ್ಲಾ ನಗರ ಪೊಲೀಸ್ ಆಯುಕ್ತರುಗಳಿಗೆ.
4) ಎಲ್ಲಾ ಜಿಲ್ಲಾ ಪೊಲೀಸ್ ಅಧೀಕ್ಷಕರುಗಳಿಗೆ. (ರೈಲ್ವೇಸ್ ಮತ್ತು ಕೆಜಿಎಫ್ ಸೇರಿದಂತೆ)

ಮಾನ್ಯರೇ

ವಿಷಯ: ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿಮಾಡುವ ಕುರಿತು.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 01 ಸೇಹಿಮ 2026 ದಿನಾಂಕ:27.02.2026
2. ಸರ್ಕಾರದ ಆದೇಶ ಸಂಖ್ಯೆ:ಸಕಇ 515 ಪಕವಿ 2026 ದಿನಾಂಕ:08.05.2026
3. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 02 ಸೇಹಿಮ 2026 ದಿನಾಂಕ:13.05.2026
4. ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ:03.03.2026

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಈ ಕಛೇರಿಯ ಉಲ್ಲೇಖ-4ರ ಪತ್ರವನ್ನು ಗಮನಿಸಲು ಕೋರಲಾಗಿದೆ. ಸದರಿ ಪತ್ರದೊಂದಿಗೆ ಸರ್ಕಾರದ ಉಲ್ಲೇಖ-1ರ ಆದೇಶವನ್ನು ಲಗತ್ತಿಸಿ ಕಳುಹಿಸಿ ಸದರಿ ಆದೇಶದಲ್ಲಿ ನೇರ ನೇಮಕಾತಿಗೆ ಸಂಬಂಧಿಸಿದಂತೆ ಸರ್ಕಾರವು ನೀಡಿರುವ ನಿರ್ದೇಶನಗಳ ಅನುಸಾರ ಈ ಕೆಳಕಂಡ ಹುದ್ದೆಗಳಿಗೆ ಸಂಬಂಧಿಸಿದಂತೆ ವರ್ಗೀಕರಣ ವಿವರವನ್ನು ನೇಮಕಾತಿ ವಿಭಾಗಕ್ಕೆ ಕಳುಹಿಸುವಂತೆ ಕೋರಲಾಗಿತ್ತು. ಅದರಂತೆ ತಮ್ಮ ಘಟಕಗಳಿಂದ ವರ್ಗೀಕರಣ ವಿವರವನ್ನು ನೇಮಕಾತಿ ವಿಭಾಗಕ್ಕೆ ಕಳುಹಿಸಲಾಗಿರುತ್ತದೆ.

| ಕ್ರ. ಸಂ | ಹುದ್ದೆ | ಕಲ್ಯಾಣ ಕರ್ನಾಟಕ | ಕಲ್ಯಾಣ ಕರ್ನಾಟಕೇತರ | ಒಟ್ಟು |
|---|---|---|---|---|
| 01 | ಡಿಟೆಕ್ಟಿವ್ ಸಬ್ ಇನ್ಸ್‌ಪೆಕ್ಟರ್ (ಡಿಎಸ್‌ಐ) | 05 | 15 | 20 |
| 02 | ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ (ಎಪಿಸಿ) | 275 | 1375 | 1650 |
| 03 | ನಾಗರಿಕ ಪೊಲೀಸ್ ಕಾನ್ಸ್‌ಟೇಬಲ್ (ಸಿವಿಲ್) | 610 | 3500 | 4110 |
| 04 | ಸ್ಪೆ. ರಿಸರ್ವ್ ಪೊಲೀಸ್ ಕಾನ್ಸ್‌ಟೇಬಲ್(ಕೆಎಸ್‌ಆರ್‌ಪಿ) | 532 | 1500 | 2032 |
| 05 | ಪೊಲೀಸ್ ಕಾನ್ಸ್‌ಟೇಬಲ್(ಕೆಎಸ್‌ಐಎಸ್‌ಎಫ್) | 364 | - | 364 |

ಪ್ರಸ್ತುತ ಸರ್ಕಾರದ ಉಲ್ಲೇಖ-2ರ ಆದೇಶದಲ್ಲಿ ಪರಿಶಿಷ್ಟ ಜಾತಿಯ ಒಟ್ಟಾರೆ ಶೇಕಡಾ 15 ಮೀಸಲಾತಿಯಲ್ಲಿ ಪ್ರವರ್ಗ-ಎ ಶೇಕಡಾ 5.25, ಪ್ರವರ್ಗ-ಬಿ ಶೇಕಡಾ 5.25 ಮತ್ತು ಪ್ರವರ್ಗ –ಸಿ ಶೇಕಡಾ 4.5 ರಂತೆ ಒಳಮೀಸಲಾತಿಯನ್ನು ನಿಗಧಿಪಡಿಸಿ ಆದೇಶಿಸಿರುತ್ತದೆ ಹಾಗೂ ಸದರಿ ಆದೇಶದಂತೆ ನೇರ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಲು ಪೂರಕವಾಗುವಂತೆ ಸರ್ಕಾರದ ಉಲ್ಲೇಖ-3ರ ಆದೇಶದಲ್ಲಿ 400 ಬಿಂದುಗಳ ನೇರ ನೇಮಕಾತಿ ರೋಸ್ಟರ್‌ಅನ್ನು (Vertical Roaster) ಅನುಬಂಧ-1ರ ಮೂಲಕ